# ಅಜಯ್ ಬೆಳ್ಳಿಹಬ್ಬ!

ಮಧ್ಯಮವರ್ಗದ ಸಾದಾಸೀದಾ ಯುವಕರ ತವಕತಲ್ಲಣಗಳನ್ನು ತೆರೆಯ ಮೇಲೆ ಸಮರ್ಥವಾಗಿ ಅಭಿನಯಿಸುವ ವಿರಳ ಕಲಾವಿದರಲ್ಲೊಬ್ಬರು ಅಜಯ್ ರಾವ್. ನಟನೆಯ ಜೊತೆಗೆ ನಿರ್ಮಾಪಕನಾಗಿಯೂ ಯಶಸ್ಸು ಕಂಡಿರುವ ಅವರ ವೃತ್ತಿಬದುಕಿನಲ್ಲೀಗ ಇಪ್ಪತ್ತೈದನೇ ಸಿನಿಮಾದ ಸಂಭ್ರಮ.

'ತಾಯಿಗೆ ತಕ್ಕ ಮಗ' ಅಜಯ್ ನಟಿಸುತ್ತಿರುವ 25ನೇ ಸಿನಿಮಾ. ರಾಜಕುಮಾರ್ ಅವರ ಜನಪ್ರಿಯ ಚಿತ್ರದ ಶೀರ್ಷಿಕೆಯ ಸಿನಿಮಾದಲ್ಲಿ ನಟಿಸುತ್ತಿರುವ ಪುಲಕ ಅವರದು. ಈ ಚಿತ್ರಕ್ಕೆ ಮತ್ತೊಂದು ವಿಶೇಷವೂ ಇದೆ. ನಿರ್ದೇಶಕ ಶಶಾಂಕ್ ಈ ಚಿತ್ರದ ನಿರ್ಮಾಪಕರಾಗಿ ಗುರ್ತಿಸಿಕೊಳ್ಳುತ್ತಿದ್ದಾರೆ. ನಿರ್ದೇಶಕರಾಗಿ ಯಶಸ್ಸು ಕಂಡಿರುವ ಅವರು, ನಿರ್ಮಾಪಕರಾಗಿ ಸದಭಿರುಚಿಯ ಸಿನಿಮಾಗಳನ್ನು ರೂಪಿಸುವ ಹಂಬಲ ಹೊಂದಿದ್ದಾರೆ. ಈ ಹಂಬಲದ ಭಾಗವಾಗಿಯೇ 'ಶಶಾಂಕ್ ಸಿನಿಮಾಸ್' ಮೂಲಕ 'ತಾಯಿಗೆ ತಕ್ಕ ಮಗ' ನಿರ್ಮಿಸುತ್ತಿದ್ದಾರೆ.

ಅಮ್ಮ ಮತ್ತು ಮಗನ ನಡುವಣ ಬಾಂಧವ್ಯ ಚಿತ್ರದ ಕಥೆ. ನಾಯಕ ನಟ ಅಜಯ್ ಹಾಗೂ ಅವರ ತಾಯಿಯ ನಡುವಣ ವಾತ್ಸಲ್ಯವನ್ನು ಶಶಾಂಕ್ ಹತ್ತಿರದಿಂದ ಕಂಡಿದ್ದಾರೆ. ಈ ನಂಟಿನಲ್ಲಿನ ಪ್ರೀತಿ, ಕಾಳಜಿ, ಅಕ್ಕರೆಯ ಭಾವಗಳನ್ನು ಕಥೆಯ ರೂಪದಲ್ಲಿ ದೃಶ್ಯರೂಪಕ್ಕೆ ಅಳವಡಿಸಿದ್ದಾರೆ.

ತಮ್ಮ ಕಥೆಗೆ ತಾವೇ ಬಂಡವಾಳ ಹೂಡುತ್ತಿದ್ದರೂ ನಿರ್ದೇಶನದ ಜವಾಬ್ದಾರಿಯನ್ನು ವೇದ್ ಗುರು ಎನ್ನುವ ಹೊಸ ಪ್ರತಿಭೆಯ ಹೆಗಲಿಗೆ ಶಶಾಂಕ್ ಹೊರಿಸಿದ್ದಾರೆ. ತಾಯಿಯ ಪಾತ್ರದಲ್ಲಿ ಸುಮಲತಾ ನಟಿಸುತ್ತಿದ್ದರೆ, ಅಜಯ್‌ಗೆ ಜೋಡಿಯಾಗಿ ಆಶಿಕಾ ರಂಗನಾಥ್ ಕಾಣಿಸಿಕೊಳ್ಳುತ್ತಿದ್ದಾರೆ. ಜೂಡಾ ಸ್ಯಾಂಡಿ ಸಂಗೀತ, ನಂದಕಿಶೋರ್ ಛಾಯಾಗ್ರಹಣ ಚಿತ್ರಕ್ಕಿದೆ.



